# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2012-13 ಸಾಲಿನಲ್ಲಿ ಕೇಂದ್ರ ಪುರಸ್ಕೃತ NRDWP ಯೋಜನೆಯಡಿ ರಾಜ್ಯದ ಪಾಲಿನ ಅನುದಾನ ಬಿಡುಗಡೆ ಮತ್ತು ವಿನಿಯೋಗ ಕುರಿತು.

ಓದಲಾಗಿದೆ: 1. ಕೇಂದ್ರ ಪುರಸ್ಕೃತ NRDWP ಪುನರಚಿತ ಮಾರ್ಗದರ್ಶಿಗಳು, 2009-10.
2. ಗ್ರಾಅಪ/59/ಗ್ರಾನೀಸ(2)2012, ದಿನಾಂಕ:30.05.2012.
3. ಗ್ರಾಅಪ/59/ಗ್ರಾನೀಸ(2)2012, ದಿನಾಂಕ:30.06.2012.

**ಪೀಠಿಕೆ:**

ಕೇಂದ್ರ ಪುರಸ್ಕೃತ **NRDWP**ಗೆ ಪೂರಕವಾಗಿ ರಾಜ್ಯ ವಲಯದ **MNP/SCP/TSP** ಬಾಬ್ತಿನ ಅನುದಾನವನ್ನು ರಾಜ್ಯದ ಪಾಲಾಗಿ ಬಿಡುಗಡೆ ಮಾಡಿ ಲೆಕ್ಕ ಹೊಂದಾಣಿಕೆ ಮಾಡಲಾಗುತ್ತಿದೆ. ಕೇಂದ್ರ ಸರ್ಕಾರವು ಬಿಡುಗಡೆ ಮಾಡಿದ ಅನುದಾನಕ್ಕೆ ಪೂರಕವಾಗಿ ರಾಜ್ಯ ವಲಯದಡಿ ರಾಜ್ಯದ ಪಾಲನ್ನು ಚಾಲ್ತಿ ಮಾರ್ಗದರ್ಶಿಗಳನ್ವಯ ಕಡ್ಡಾಯವಾಗಿ ಬಿಡುಗಡೆ ಮಾಡಬೇಕಾದ ನಿಬಂಧನೆಯಿದೆ. ಜೊತೆಗೆ 2011-12ನೇ ಸಾಲಿನ ಕೊರತೆ ರೂ.39.825ಕೋಟಿ ಬಿಡುಗಡೆ ಮಾಡಬೇಕಾಗಿದೆ. ಅಂತೆಯೇ, ರಾಜ್ಯವಲಯದ **MNP/SCP/TSP**ಯಡಿ ಲಭ್ಯವಿರುವ **ರೂ.107.575ಕೋಟಿ** ಅನುದಾನವನ್ನು ರಾಜ್ಯ ಹುಜೂರು ಖಜಾನೆಯಿಂದ ತೆಗೆದು ಈಗಾಗಲೇ ಅಧಿಕೃತವಾಗಿ ಘೋಷಿಸಿರುವ ರಾಷ್ಟ್ರೀಕೃತ ಬ್ಯಾಂಕಿನ ಮುಖೇನ ವಿನಿಯೋಗಿಸಲು **Mission Director, SWSM,** ಬೆಂಗಳೂರುರವರಿಗೆ ಬಿಡುಗಡೆ ಮಾಡಬೇಕಾಗಿದೆ. ಆದ್ದರಿಂದ, ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 59 ಗ್ರಾನೀಸ(2)2012 ಬೆಂಗಳೂರು, ದಿನಾಂಕ:12.12.2012**

ಪೀಠಿಕೆಯಲ್ಲಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ, **ರೂ.107.575ಕೋಟಿ (ಒಂದು ನೂರು ಏಳು ಕೋಟಿ ಐವತ್ತೇಳು ಲಕ್ಷ ಐವತ್ತು ಸಾವಿರ ರೂಪಾಯಿಗಳು ಮಾತ್ರ)**ಗಳನ್ನು **Mission Director, State Water & Sanitation Mission (SWSM),** ಬೆಂಗಳೂರು ರವರಿಗೆ ಕೇಂದ್ರ ಸರ್ಕಾರಕ್ಕೆ ವರದಿ ಮಾಡಿರುವ ರಾಷ್ಟ್ರೀಕೃತ ಬ್ಯಾಂಕ್ ಖಾತೆಗೆ ರಾಜ್ಯವಲಯದ **NRDWP - MNP**ಯಡಿ **ರೂ.5813.00 SCP**ಯಡಿ **ರೂ.3093.50ಲಕ್ಷ** ಹಾಗೂ **TSP**ಯಡಿ **ರೂ.1851.00ಲಕ್ಷ** ಸೇರಿ ಒಟ್ಟಾರೆ **ರೂ.10757.50ಲಕ್ಷ(ಒಂದು ನೂರು ಏಳು ಕೋಟಿ ಐವತ್ತೇಳು ಲಕ್ಷ ಐವತ್ತು ಸಾವಿರ ರೂಪಾಯಿಗಳು ಮಾತ್ರ)**ಗಳ ಅನುದಾನವನ್ನು ಜಮೆ ಮಾಡಿ ಅನುಮೋದಿತ **RWS** ಕ್ರಿಯಾಯೋಜನೆಯನ್ವಯ ಜಿಲ್ಲಾ ಪಂಚಾಯತಿಗಳ ಮುಖೇನ ವಿನಿಯೋಗಿಸುವ ಸಂಬಂಧ ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ.

2. ಸದರಿ ರಾಜ್ಯವಲಯದ ಅನುದಾನವನ್ನು **Payees Receipt** ಮೇಲೆ **Mission Director, State Water & Sanitation Mission (SWSM)** ರವರ ಮೇಲು ರುಜುವಿನೊಂದಿಗೆ ರಾಜ್ಯ ಹುಜೂರ್ ಖಜಾನೆಯಿಂದ ಪಡೆದು ಅಧಿಕೃತವಾಗಿ ಕೇಂದ್ರ ಸರ್ಕಾರಕ್ಕೆ ಘೋಷಣೆ ಮಾಡಿರುವ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ **MNP/SCP/TSP**ಯಡಿ ರಾಜ್ಯದ ಪಾಲಾಗಿ ಠೇವಣಿಯಿಡತಕ್ಕದ್ದು.

3. ಮೇಲ್ಕಂಡ ಅನುದಾನವನ್ನು ಗ್ರಾಮೀಣ ನೀರು ಪೂರೈಕೆ ಬಾಬ್ತಿನ ಬೇಡಿಕೆಗಳ ಸಂಬಂಧ ಅನುಮೋದಿತ ಕ್ರಿಯಾಯೋಜನೆ, **GoI** ಮಾರ್ಗದರ್ಶಿಗಳು ಹಾಗೂ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳನ್ವಯ ಆಯಾ ಜಿಲ್ಲಾ ಪಂಚಾಯತಿಗಳು **ಅನುಬಂಧ-1ರನ್ವಯ** ಬ್ಯಾಂಕ್ ಮುಖೇನ **RTGS**ನಡಿ ಅನುದಾನ ವಿನಿಯೋಗಿಸಲು ಕ್ರಮ ವಹಿಸತಕ್ಕದ್ದು. ಈ ಅನುದಾನದಲ್ಲಿ ಕೇಂದ್ರ ಸರ್ಕಾರವು 2011-12ರ ಸಾಲಿನಲ್ಲಿ ರಾಜ್ಯದ ಪಾಲಿನ ಕೊರತೆ ರೂ.39.825ಕೋಟಿ ಕುರಿತಂತೆ ಪ್ರಸ್ತಾಪಿಸಿರುವುದರಿಂದ, ಸದರಿ ರೂ.39.825 ಕೋಟಿಗಳನ್ನು ಹೆಚ್ಚುವರಿ ಅನುದಾನವಾಗಿ 2012-13ರ ಸಾಲಿಗೆ ಸೇರಿದಂತೆ ಬಿಡುಗಡೆ ಮಾಡಿದೆಯೆಂದು ತಿಳಿದು, ಈ ಅನುದಾನವನ್ನು ಸಂಪೂರ್ಣವಾಗಿ ವಿನಿಯೋಗಿಸುವುದು.

5. ಈ ಆದೇಶವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರು ಯೋಜನೆಗಳ ಮುಂದುವರಿಕೆಗೆ ಹೊರಡಿಸಿರುವ **ಆದೇಶ ಸಂಖ್ಯೆ: ಗ್ರಾಅಪ/13/ಆಂಆಸ/2012, ದಿನಾಂಕ:02.04.2012**ರನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ (ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪ್ರತಿಗಳು:

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು-1) ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಎಯು-2) ಕರ್ನಾಟಕ, ಬೆಂಗಳೂರು.
4. ಉಪ ಮಹಾಲೇಖಪಾಲರು, ಮಹಾಲೇಖಪಾಲರು (ಎಯು-1) ರವರ ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು-1.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು-1.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬೆಂಗಳೂರು.
9. ಪ್ರಾದೇಶಿಕ ಆಯುಕ್ತರು, ಪ್ರಾದೇಶಿಕ ಆಯುಕ್ತರ ಕಛೇರಿ,2ನೇ ಮಹಡಿ, ಬಿ.ಎಂ.ಟಿ.ಸಿ. ಕಟ್ಟಡ, ಬೆಂಗಳೂರು.
10. ವಿಶೇಷಾಧಿಕಾರಿಗಳು (ಜಿಪಂ) ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ ಬೆಂಗಳೂರು.
11. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
12. ಮುಖ್ಯ ಇಂಜಿನಿಯರ್, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆ, ಕರ್ನಾಟಕ ಕೊಳಚೆ ನಿರ್ಮೂಲನಾಮಂಡಳಿ, ಸಂಕೀರ್ಣ ನಂ55, 4ನೇ ಮಹಡಿ, ಅಭಯ ಕಾಂಪ್ಲೆಕ್ಸ್, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-20.
13. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರು.
14. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು / ಮುಖ್ಯ ಲೆಕ್ಕಾಧಿಕಾರಿಗಳು.
15. ಎಲ್ಲಾ ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
16. ರಾಜ್ಯದ ಎಲ್ಲಾ (8) ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತಗಳ ಅಧೀಕ್ಷಕ ಅಭಿಯಂತರುಗಳು.
17. ರಾಜ್ಯದ ಎಲ್ಲಾ (38)ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಅಭಿಯಂತರುಗಳು.
18. ಮುಖ್ಯ ಲೆಕ್ಕಾಧಿಕಾರಿಗಳು, ಮುಖ್ಯ ಇಂಜಿನಿಯರ್‌ರ ಕಛೇರಿ, PRED, ಬೆಂಗಳೂರು-20.
19. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
20. ಉಪನಿರ್ದೇಶಕರು, ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ನಂ.49,ಖನಿಜಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
21. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.
22. ನಿರ್ದೇಶಕರು, ಶ್ರೀ ಅಬ್ದುಲ್ ನಜೀರ್‌ಸಾಬ್ ರವರ ಗ್ರಾಮೀಣಾಭಿವೃದ್ಧಿ ರಾಜ್ಯ ಸಂಸ್ಥೆ, ಲಲಿತ್ ಮಹಲ್ ರಸ್ತೆ, ಮೈಸೂರು.
23. ಮಿಷನ್ ನಿರ್ದೇಶಕರು, SWSM ಮತ್ತು ಸರ್ಕಾರದ ಪದನಿಮಿತ್ತ ಜಂಟಿ ಕಾರ್ಯದರ್ಶಿಗಳು / KRWSSA, ಕಾವೇರಿ ಭವನ, ಬೆಂಗಳೂರು-09.
24. ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳು/ ಕಾರ್ಯದರ್ಶಿ/ನಿರ್ದೇಶಕರು (ಗ್ರಾಮೂಸೌ) ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು/ಮುಖ್ಯಸ್ಥರು, ಗ್ರಾಮ ಸ್ವರಾಜ್/ ಆಂತರಿಕ ಆರ್ಥಿಕ ಸಲಹೆಗಾರರು ಇವರುಗಳ ಆಪ್ತ ಸಹಾಯಕರು.
25. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾಅಪಂರಾ ಇಲಾಖೆ(ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
26. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು.
27. ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಮಾಹಿತಿ ಕೇಂದ್ರ (10 ಪ್ರತಿಗಳು).
28. ಶಾಖಾ ರಕ್ಷಾ ಕಡತಃ ಹೆಚ್ಚುವರಿ ಪ್ರತಿಗಳು.

ಅನುಬಂಧ-1

ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ/59/ಗ್ರಾನೀಸ(2)2012 ದಿ:12.12.2012ರ ಲಗತ್ತು

2012-13ರ ಸಾಲಿನಲ್ಲಿ ಜಿಲ್ಲಾ ಪಂಚಾಯತಿಗಳಿಗೆ ರಾಜ್ಯವಲಯದ NRDWP /SCP/TSP

(ರೂ.ಲಕ್ಷಗಳಲ್ಲಿ)

| ಕ್ರ ಸಂ | ಜಿಲ್ಲೆ | ಬಿಡುಗಡೆ ಮಾಡಬಹುದಾದ ಅನುದಾನ | | | ಒಟ್ಟು ಬಿಡುಗಡೆ ಮಾಡಲಾದ ಅನುದಾನ |
|---|---|---|---|---|---|
| | | NRDWP | SCP | TSP | |
| 1 | 2 | 3 | 4 | 5 | 6 |
| 1 | ಬೆಂಗಳೂರು(ಗ್ರಾ) | 287.85 | 46.75 | 27.97 | 362.57 |
| 2 | ರಾಮನಗರ | 105.29 | 56.03 | 33.52 | 194.85 |
| 3 | ಬೆಂಗಳೂರು(ನ) | 331.84 | 70.16 | 41.98 | 443.98 |
| 4 | ಕೋಲಾರ | 639.09 | 74.02 | 44.28 | 757.39 |
| 5 | ಚಿಕ್ಕಬಳ್ಳಾಪುರ | 144.41 | 76.85 | 45.99 | 267.25 |
| 6 | ತುಮಕೂರು | 520.38 | 276.93 | 165.71 | 963.02 |
| 7 | ಚಿತ್ರದುರ್ಗ | 534.76 | 284.58 | 170.29 | 989.63 |
| 8 | ದಾವಣಗೆರೆ | 132.21 | 70.36 | 42.10 | 244.66 |
| 9 | ಶಿವಮೊಗ್ಗ | 86.88 | 46.24 | 27.66 | 160.78 |
| 10 | ಮೈಸೂರು | 386.31 | 152.37 | 91.17 | 629.85 |
| 11 | ಮಂಡ್ಯ | 228.87 | 68.58 | 41.03 | 338.48 |
| 12 | ಚಾಮರಾಜನಗರ | 59.22 | 31.51 | 18.86 | 109.59 |
| 13 | ಹಾಸನ | 171.58 | 91.31 | 54.65 | 317.54 |
| 14 | ದಕ್ಷಿಣ ಕನ್ನಡ | 451.01 | 133.58 | 79.92 | 664.51 |
| 15 | ಉಡುಪಿ | 131.30 | 69.87 | 41.81 | 242.98 |
| 16 | ಕೊಡಗು | 84.89 | 45.18 | 27.02 | 157.09 |
| 17 | ಚಿಕ್ಕಮಗಳೂರು | 215.12 | 61.26 | 36.65 | 313.03 |
| 18 | ಬೆಳಗಾಂ | 668.75 | 89.80 | 53.74 | 812.30 |
| 19 | ಧಾರವಾಡ | 212.02 | 59.61 | 35.66 | 307.29 |
| 20 | ಹಾವೇರಿ | 94.52 | 50.30 | 30.09 | 174.91 |
| 21 | ಗದಗ | 51.60 | 27.46 | 16.43 | 95.49 |
| 22 | ಉತ್ತರ ಕನ್ನಡ | 136.25 | 40.61 | 24.29 | 201.15 |
| 23 | ವಿಜಾಪುರ | 0.00 | 148.29 | 88.72 | 237.02 |
| 24 | ಬಾಗಲಕೋಟೆ | 0.00 | 138.50 | 82.86 | 221.36 |
| 25 | ಗುಲ್ಬರ್ಗಾ | 138.85 | 73.89 | 44.22 | 256.96 |
| 26 | ಯಾದಗಿರಿ | 0.00 | 44.71 | 26.76 | 71.47 |
| 27 | ಬೀದರ್ | 0.00 | 43.37 | 25.96 | 69.33 |
| 28 | ರಾಯಚೂರು | 0.00 | 212.75 | 127.31 | 340.06 |
| 29 | ಕೊಪ್ಪಳ | 0.00 | 285.85 | 171.03 | 456.88 |
| 30 | ಬಳ್ಳಾರಿ | 0.00 | 222.76 | 133.29 | 356.06 |
| | ಒಟ್ಟು | 5813.00 | 3093.50 | 1851.00 | 10757.50 |

(ರಾಮಕೃಷ್ಣ)

ಸರ್ಕಾರದ ಉಪ ಕಾರ್ಯದರ್ಶಿ (ಗ್ರಾನೀಸ)

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

12/12/2012